ಬಾಗಲಕೋಟೆಯಲ್ಲಿ ಸರ್ಕಾರಿ ಭೂಮಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅನಿಲ್ ಗುನ್ನಾಪುರ, ಸಾಹಿತ್ಯ ಕ್ಷೇತ್ರದಲ್ಲಿ ಕಥಾವಿಸ್ತೀರ್ಣದ ಬಗ್ಗೆ ಅಪರಿಮಿತ ಕುತೂಹಲಿ. ಬಿಸಿಲು ಬೆಳುದಿಂಗಳು ಸೀಮೆಯ ತವಕತಲ್ಲಣಗಳಲ್ಲಿ ಕಥೆಗಳನ್ನು ಹುಡುಕುತ್ತಿರುವವರು. 'ಕಲ್ಲುಹೂವಿನ ನೆರಳು' ಸಹೃದಯರ ಗಮನಸೆಳೆದಿರುವ, ಪ್ರಶಸ್ತಿ–ಗೌರವಗಳಿಗೆ ಪಾತ್ರವಾಗಿರುವ ಅನಿಲ್‌ರ ಕಥಾಸಂಕಲನ. 2018ರ ಸಾಲಿನಲ್ಲಿ ದೀಪಾವಳಿ ಕಾವ್ಯಸ್ಪರ್ಧೆಯಲ್ಲಿ ಮೂರನೇ ಬಹುಮಾನ ಪಡೆದಿರುವ ಅವರು, 'ಗುಬ್ಬಚ್ಚಿ ಗೂಡಿನಲ್ಲಿ' ಎನ್ನುವ ಕವನ ಸಂಕಲನ ಪ್ರಕಟಿಸಿದ್ದಾರೆ.

ಕನಸಾ? ನಿಜಾನಾ? ಯಾವುದೂ ಗೊತ್ತಾಗಲಿಲ್ಲ. ತಲೆ ಜಾಡಿಸಿಕೊಂಡ. ಇಲ್ಲಿ ಎಲ್ಲವೂ ತನ್ನ ಕೈಮೀರಿ ನಡೆಯುತ್ತಿದೆ ಅನಿಸಿತು. ತಾನು ಯಾವ ವಿಷಯವನ್ನು ಮರೆಯಬೇಕೆಂದು ಪ್ರಯತ್ನಿಸುತ್ತಿರುವೆನೋ ಹೆಜ್ಜೆ ಹೆಜ್ಜೆಗೆ ಅದೇ ನೆನಪಾಗುತ್ತಿದೆಯೆಂದು ಉಮ್ಮಳಿಸಿ ಬಂದ ದುಃಖವನ್ನು ತಡೆಹಿಡಿದ. ಊರಲ್ಲಿ 'ಮಾದ್ಯಾನ ಮೂಗು ಸೇಮ್ ಟೂ ಸೇಮ್ ಪಡಶೆಟ್ಟಿ ಸೀನಪ್ಪನಂಗ ಆದಲಾ?' ಎಂದು ಒಬ್ಬನೆಂದರೆ, ಮತ್ತೊಬ್ಬ 'ಹಂಗ ಅನಬ್ಯಾಡೋ ಮಾರಾಯ... ಶಿವನಗೌಡ ಸಿಟ್ಟ ಮಾಡ್ಕೋತಾನ?' ಎನ್ನುತ್ತಿದ್ದ. ಎಷ್ಟೋ ವರ್ಷಗಳವರೆಗೂ ತನ್ನನ್ನೇಕೆ ಊರಲ್ಲಿಯ ಪುಡಾರಿಗಳಿಗೆಲ್ಲ ಹೋಲಿಕೆ ಮಾಡ್ತಾರೆಂಬುದೇ ಅವನಿಗೆ ಗೊತ್ತಾಗಿರಲಿಲ್ಲ. ತಾನು ದೇವದಾಸಿಯೊಬ್ಬಳ ಮಗನೆಂದು ಅವನಿಗೆ ತೀರಾ ಇತ್ತೀಚೆಗೆ ಗೊತ್ತಾಗಿತ್ತು. ಅವ್ವ ಬದುಕಿದ್ದರೆ ಊರ ಮಂದಿಯ ಪ್ರಶ್ನೆಗಳಿಗೆಲ್ಲ ನೀನೇ ಉತ್ತರಿಸು ಮಾರಾಯ್ತಿ ಎಂದು ಜಾರಿಕೊಳ್ಳಬಹುದಿತ್ತು. ಇದ್ಯಾವುದರ ಕಿರಿಕಿರಿಯೇ ಬೇಡವೆಂದು ನಾನು ಹುಟ್ಟುವಾಗಲೇ ಕಣ್ಮುಚ್ಚಿ ಅನಾಥನನ್ನಾಗಿ ಮಾಡಿದಳೆಂದು ಪದೇ ಪದೇ ಹನಿಗಣ್ಣಾಗುತ್ತಿದ್ದ. ಸಣ್ಣವನಿದ್ದಾಗ ಜನರಾಡುವ ಕುಹಕದ ಮಾತುಗಳನ್ನು ಕೇಳಿ ಕೇಳಿ ಸಾಕಾಗಿ, ತನ್ನ ನಿಜವಾದ ಅಪ್ಪ ಯಾರೆಂದು ತಿಳಿಯಲು ಪಡಶೆಟ್ಟಿ ಸೀನಪ್ಪ ಮತ್ತು ಶಿವನಗೌಡನ ಎದುರಿಗೆ ಹೋಗಿ ಅವರೊಂದಿಗೆ ತನ್ನನ್ನು ಹೋಲಿಕೆ ಮಾಡಿಕೊಳ್ಳುತ್ತ ನಿಂತು ಬಿಡುತ್ತಿದ್ದ. ಅವನ ಈ ಸ್ವಭಾವ ಕಂಡು ಮಾದೇವನ ಹೆಸರು ಎಲ್ಲರ ಬಾಯಲ್ಲಿ ಮಳ್ಳ ಮಾದ್ಯಾ ಆಗಿ ರೂಪಾಂತರಗೊಂಡಿತ್ತು. ಇದೇ ಕಾರಣಕ್ಕೆ ಅವತ್ತು ದುಂಡವ್ವ ಆಯಿ ಅವನನ್ನು ಕರೆದು ಹೇಳಿದ ಮಾತುಗಳು ಇನ್ನೂ ಅವನ ಕರ್ಣಗಳಲ್ಲಿ ಪ್ರತಿಧ್ವನಿಸುತ್ತಿದ್ದವು.

'ಮಾದು... ನಾ ಸತ್ತ ಮರ್ದಿನಾ ಈ ಊರು ಬಿಡು... ಕೈ ಬಾಯಿ ಸ್ವಚ್ಛ ಇದ್ರ ಎಲ್ಯಾರೆ ಬದುಕಬಹುದು, ಈ ಊರಾನ ಮಂದಿ ಭೊಲೊ ಇಲ್ಲ... ಇಲ್ಲಿದ್ರ ತಲೆಗೊಂದು ಮಾತಾಡಿ ನಿನಗ ಹುಚ್ಚೇ ಹಿಡಸ್ತಾರ...' ಎಂದು ಸಣ್ಣ ಮಗುವಿಗೆ ತಿಳಿ ಹೇಳುವ ಹಾಗೆ ಹೇಳಿದ್ದಳು. ಆಯಿ ಸತ್ತ ಮರುದಿನವೇ ಮಾದೇವ ಊರು ಬಿಟ್ಟಿದ್ದ.

* * *

ಮರುದಿನ, ಮಾದೇವ ಪೊಲೀಸ್ ಸ್ಟೇಷನ್ನಿನಲ್ಲಿ ಇರುವ ಸುದ್ದಿ ಸುತ್ತೆಲ್ಲ ಅಂಗಡಿಯವರಿಗೂ ತಲುಪಿತು. ಮುಖ್ಯವಾಗಿ ಈ ಬೆಳವಣಿಗೆ ಗುರುಪ್ಪನಿಗೆ ಹೆಚ್ಚಿನ ಚಿಂತೆಗೆ ಈಡುಮಾಡಿತು. ಈಗ ಹೇಗಾದರೂ ಮಾಡಿ ಮಾದೇವನನ್ನು ಬಿಡಿಸಿಕೊಳ್ಳಬೇಕು. ಇಲ್ಲವಾದರೆ, ಮತ್ತೆ ನೀರು ತಂದು ಹಾಕುವುದು ಮತ್ತೆ ನನ್ನ ಪಾಲಿಗೆ ಬರುವುದೆಂದು ತನಗೆ ಪರಿಚಯವಿರುವ ಅಂಗಡಿ ಮಾಲೀಕರುಗಳ ಎದುರಲ್ಲಿ ಸಹಾಯಕ್ಕಾಗಿ ವಿನಂತಿಸಿಕೊಂಡ. ಅವನ ಮಾತನ್ನು ಯಾರೂ ಗಂಭೀರವಾಗಿ ತಲೆಗೆ ಹಾಕಿಕೊಳ್ಳಲಿಲ್ಲ. ಕೊನೆಗೆ ಹಾಗೂ ಹೀಗೂ ಮಾಡಿ ನವನಗರ ಬಸ್ ನಿಲ್ದಾಣದ ಹಿಂದಿದ್ದ ಲಿಂಗಾಯತ ಖಾನಾವಳಿ ಮಾಲೀಕ ಧರೆಪ್ಪನಿಗೆ ಒಪ್ಪಿಸಿ ಸ್ಟೇಷನ್‌ಗೆ ಕರೆದುಕೊಂಡು ಬರುವಲ್ಲಿ ಯಶಸ್ವಿಯಾದ. ವಯಸ್ಸಿನಲ್ಲಿ ಹಿರಿಯನಾಗಿದ್ದರೂ ಎಲ್ಲರೊಡನೆ ಸಲುಗೆಯಿಂದ ಇದ್ದು, ಪ್ರೀತಿಯಿಂದ ಧರೆಪ್ಪ ಕಾಕಾ ಎಂದು ಕರೆಯಿಸಿಕೊಳ್ಳುತ್ತಿದ್ದ ಅವನ ಬಗ್ಗೆ ಅಕ್ಕಪಕ್ಕದ ಅಂಗಡಿಯವರಿಗೆಲ್ಲ ಗೌರವವಿತ್ತು. ಇನ್ನೂ ಎಸ್.ಐ ಬಂದಿರಲಿಲ್ಲ. ಅಲ್ಲಿಯೇ ಇದ್ದ ಉದ್ದನೆಯ ಕುರ್ಚಿಯ ಮೇಲೆ ಕೂತು ಮಾತಿನಲ್ಲಿ ತೊಡಗಿದರು. ಅದರಲ್ಲೂ ಧರೆಪ್ಪ ತಾನೀಗ ಸ್ಟೇಷನ್ನಿನಲ್ಲಿ ಇರುವೆನೆಂಬುದನ್ನು ಮರೆತು ಎಂದಿನಂತೆ ಜೋರು ಧ್ವನಿಯಲ್ಲಿ ತನ್ನ ಗತಕಾಲದ ಇತಿಹಾಸವನ್ನು ಬಿಚ್ಚಿಡತೊಡಗಿದ.

'ಖರೆ ಹೇಳಬೇಕಂದ್ರ... ಆವಾಗ ಇಡೀ ಬಾಗಲಕೋಟದಾಗ ಇದ್ದುದ್ದು ಎರಡೇ ಎರಡು ಖಾನಾವಳಿ, ಕೆಂಪು ರೋಡ್ ಕಡೆ ಇದ್ದ ಸಾವಜಿ ಖಾನಾವಳಿ ಒಂದು, ಇನ್ನೊಂದು ನಮ್ಮ ಲಿಂಗಾಯತ ಖಾನಾವಳಿ. ಈ ಊರಿಗೆ ಯಾರ ದೊಡ್ಡವರು